ಜನತಾ ಮಾಧ್ಯಮ
12-01-2018 ಶುಕ್ರವಾರ

ಹವಾಮಾನ
ಗುರುವಾರ ಗರಿಷ್ಠ ಉಷ್ಣಾಂಶ 28.2° , ಕನಿಷ್ಠ 24.2° ತೇವಾಂಶ:4.0°

ತ್ರಿವಳಿ ತಲಾಖ್ ನಿಷೇಧಕ್ಕೆ ಸುಗ್ರೀವಾಜ್ಞೆ ?

ನವದೆಹಲಿ : ತ್ರಿವಳಿ ತಲಾಖ್ ಪದ್ಧತಿ ಅಪರಾಧ ಎಂದು ಪರಿಗಣಿಸುವ ಕಾಯ್ದೆ ಅನುಷ್ಠಾನಗೊಳಿಸುವ ಮಸೂದೆಗೆ ರಾಜ್ಯಸಭೆಯಲ್ಲಿ ನಿರೀಕ್ಷಿತ ಬೆಂಬಲ ಲಭಿಸದ ಹಿನ್ನೆಲೆಯಲ್ಲಿ, ಈ ಸಂಬಂಧ ಸುಗ್ರೀವಾಜ್ಞೆ ಹೊರಡಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ತ್ರಿವಳಿ ತಲಾಖ ನಿಷೇಧಕ್ಕೆ ಸುಗ್ರೀವಾಜ್ಞೆ ಜಾರಿಗೊಳಿಸುವುದೂ ಸೇರಿದಂತೆ ಎಲ್ಲ ಸಾಧ್ಯತೆಗಳನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಫೆಬ್ರವರಿಯಲ್ಲಿ ನಡೆಯುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಉಭಯ ಸದನಗಳ ಜಂಟಿ ಅಧಿವೇಶನ ನಡೆಸುವ ಮೂಲಕ ರಾಜ್ಯಸಭೆಯ ಒಪ್ಪಿಗೆ ಪಡೆಯದೇ ತ್ರಿವಳಿ ತಲಾಖ್ ನಿಷೇಧ ವಿಧೇಯಕಕ್ಕೆ ಒಪ್ಪಿಗೆ ಪಡೆಯುವ ಸಾಧ್ಯತೆಯನ್ನೂ ಸಹ ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ. ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಅಡೆತಡೆಯನ್ನು ನಿವಾರಿಸುವುದು ಇದರ ಉದ್ದೇಶವಾಗಿದೆ ಎಂದು ಮೂಲಗಳು ಹೇಳಿವೆ.

ಮಹದಾಯಿಗಾಗಿ ಜ.27ರಂದು ಕರ್ನಾಟಕ ಬಂದ್‌ಗೆ ವ್ಯಾಪಕ ಬೆಂಬಲ

ಬೆಂಗಳೂರು: ಮಹದಾಯಿಗಾಗಿ ಆಗ್ರಹಿಸಿ ಕನ್ನಡ ಒಕ್ಕೂಟ ಕರೆಕೊಟ್ಟಿರುವ ಜ.27ರ ಕರ್ನಾಟಕ ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಕನ್ನಡ ಸಂಘಟನೆಗಳು, ರೈತಪರ ಸಂಘಟನೆಗಳು, ಸ್ವಯಂಸೇವಾ ಸಂಘಗಳು ಸೇರಿದಂತೆ ಕನ್ನಡ ಒಕ್ಕೂಟವನ್ನು ಬೆಂಬಲಿಸಿ ಕರ್ನಾಟಕ ಬಂದ್‌ಗೆ ಮುಂದಾಗಿವೆ. ಈ ಸಂಬಂಧ ಈ ಸಂಜೆಯೊಂದಿಗೆ ಮಾತನಾಡಿದ ಒಕ್ಕೂಟದ ಮುಖಂಡರಾದ, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರೂ ಆದ ಸಾ.ರಾ.ಗೋವಿಂದು ಅವರು ನಾಡಿನ ಹಿತ ಕಾಯುವ ದೃಷ್ಟಿಯಿಂದ ಉತ್ತರ ಕರ್ನಾಟಕ ಜನರ ದಾಹ ನೀಗಿಸುವ ಹಿನ್ನೆಲೆಯಲ್ಲಿ ಮಹದಾಯಿಗಾಗಿ ಕನ್ನಡ ಒಕ್ಕೂಟ ಹೋರಾಟ ನಡೆಸುತ್ತಿದೆ.

ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ ನೇತೃತ್ವದಲ್ಲಿ ನಡೆಯುತ್ತಿರುವ ಹೋರಾಟಕ್ಕೆ ರಾಜ್ಯಾದ್ಯಂತ ಬೆಂಬಲ ವ್ಯಕ್ತವಾಗಿದೆ.

ನ್ನಡ ಮತ್ತು ಸಂಸ್ಕೃತಿ
ಯುವ

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ನಯನ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ವತಿಯಿಂದ ನಡೆದ ಪ್ರತಿಭಾವಂತ ಕಲಾವಿದರಿಗಾಗಿ ನಡೆಸುವ ಯುವಸೌರಭ ಕಾರ್ಯಕ್ರಮದಲ್ಲಿ ಜಿಲ್ಲೆಯ ಖ್ಯಾತ ಭರತನಾಟ್ಯ ಕಲಾವಿದೆ ಡಾ. ಸ್ವಾತಿ ಪಿ ಭಾರದ್ವಾಜ ತನ್ನ 1063ನೇ ಏಕವ್ಯಕ್ತಿ ಭರತನಾಟ್ಯ ಪ್ರದರ್ಶನ ನೀಡಿದ್ದು ಪ್ರೇಕ್ಷಕರ ಮನಸೂರೆಗೊಳಿಸಿತು. ಸರ್ಕಾರದ ವತಿಯಿಂದ ಪ್ರಶಸ್ತಿ ಪತ್ರ ನೀಡಲಾಯಿತು

ಜ.13ಕ್ಕೆ ಜಾಗರಣೆ, ಭಜನೆ

ರಾಮನಾಥಪುರ: ಇಲ್ಲಿಯ ರಾಮೇಶ್ವರಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ಕಾವೇರಿ ನದಿ ವಹ್ನಿಪುಷ್ಕರಣಿಯ ದಂಡೆಯಲ್ಲಿ ಜ. 13 ರಂದು ಶನಿವಾರ ರಾತ್ರಿ 9 ಗಂಟೆಯಿಂದ ಬೆಳಿಗಿನ ಜಾವ 5 ಗಂಟೆಯವರೆವಿಗೆ ನೂರಾರು ಭಕ್ತರಿಂದ ಜಾಗರಾಣೆ, ಭಜನೆ ಹಾಗೂ ಮಂಗಳಂ ಕಾರ್ಯಕ್ರಮ ನಡೆಯಲಿದೆ ಎಂದು ಸಮಿತಿ ಸದಸ್ಯ ಜಯರಾಂಜಿ ತಿಳಿಸಿದರು. ಶ್ರೀ ಹೇವಿಳಂಬಿ ಸಂವತ್ಸರ ಪುಷ್ಯಮಾಘ ಮಾಸ ಮಕರ ಸಂಕ್ರಾತಿ ಹಬ್ಬದ ಪ್ರಯುಕ್ತ ನಡೆಯುವ ಜಾಗರಣೆ, ಭಜನೆ ಹಾಗೂ ಮಂಗಳಂ ಕಾರ್ಯಕ್ರಮದಲ್ಲಿ ರಾಜಸ್ಥಾನದ ಶ್ರೀ ಸಿರಿ, ರವಿ, ಶಂಕರಾನಂದಗಿರಿ ಮಹಾರಾಜ್ ಅವರು ಸಾನಿಧ್ಯ ವಹಿಸುವರು. ಜ.14ರ ಭಾನುವಾರ ಬೆಳಗಿನ ಜಾವದಲ್ಲಿ ಕಾವೇರಿ ನದಿ ವಹ್ನಿಪುಷ್ಕರಣಿ ಯಲ್ಲಿ ಸಾವಿರಾರು ರಾಜಸ್ಥಾನದ ಸಮಾಜದ ಮೂಲದ ಭಕ್ತರು ಪುಣ್ಯ ಸ್ನಾನ ಮಾಡುವರು. ಶ್ರೀ ರಾಮೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ಮಧುಕೇಶ್ವರ ಯಜ್ಞ ಶಾಲೆಯಲ್ಲಿ ಜ. 14 ರಂದು ಭಾನುವಾರ ಬೆಳಿಗ್ಗೆ 8 ಗಂಟೆಗೆ ಮಹಾಯಜ್ಞ, ಹೋಮ, ಪೂಜಾ ಕೈಂಕರ್ಯಗಳು ನಡೆಯಲಿದೆ. ಬರುವ ಸಾವಿರಾರು ಭಕ್ತರಿಗೆ ದಾಸೋಹದ ವ್ಯವಸ್ಥೆ ಇದೆ ಎಂದು ಜಯರಾಂಜಿ ತಿಳಿಸಿದರು.

ಜ.13ರಿಂದ ಸುತ್ತೂರು ಜಾತ್ರಾ ಮಹೋತ್ಸವ ಪ್ರಾರಂಭ

ರಾಮನಾಥಪುರ: ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವು ಇದೇ ಜನವರಿ 13 ರಿಂದ 18 ರವರೆಗೆ ಸುತ್ತೂರು ಜಾತ್ರಾ ಮಹೋತ್ಸವ ಅಂಗವಾಗಿ, ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಹಾಸನ ಜಿಲ್ಲೆ ಹಾಗು ಅರಕಲಗೂಡು ತಾಲ್ಲೂಕಿನ ಭಕ್ತರು ಹೆಚ್ಚಿನ ಸಂಖೆಯಲ್ಲಿ ಭಾಗವಹಿಸುವಂತೆ ತಾಲ್ಲೂಕು ಶರಣ ಸಾಹಿತ್ಯ ಪತಿಷತ್ತು ಖಜಾಂಚಿ ಸೋಮಶೇಖರ್ ಹಾಗೂ ಸದಸ್ಯರು ಮನವಿ ಮಾಡಿದರು.

ರಾಮನಾಥಪುರ ಗ್ರಾ.ಪಂ. ವ್ಯಾಪ್ತಿಯ ಕೋಟವಾಳು ಗ್ರಾಮದ ಬಸವೇಶ್ವರ ದೇವಸ್ಥಾನದ ಅವರಣದಲ್ಲಿ ಮಾತನಾಡಿದ ಅವರು ಸುತ್ತೂರು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವು ಪ್ರತಿ ವರ್ಷ ಪುಷ್ಯ ಬಹುಳ ದ್ವಾದಶಿಯಂದು ಪ್ರಾರಂಭವಾಗುತ್ತದೆ. 6 ದಿವಸಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಜೊತೆಗೆ ರಥೋತ್ಸವ, ಕೊಂಡೋತ್ಸವ, ತೆಪ್ಪೋತ್ಸವ ಹಾಗೂ ಶ್ರೀಕ್ಷೇತ್ರದಲ್ಲಿರುವ ಶ್ರೀ ಸೋಮೇಶ್ವರಸ್ವಾಮಿ, ವೀರಭದ್ರೇಶ್ವರಸ್ವಾಮಿ, ಮಹದೇಶ್ವರಸ್ವಾಮಿ, ನಾರಾಯಣಸ್ವಾಮಿ ಹಾಗೂ ಗ್ರಾಮದೇವತೆ ಹಾಗೂ ಇತರೆಡೆಗಳಲ್ಲಿ ಕಾಲಕಾಲಕ್ಕೆ ವಿಶೇಷ ಪೂಜಾ ಮಹೋತ್ಸವಗಳು ಮತ್ತು ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಜಾತ್ರಾ ಮಹೋತ್ಸವದ ಪ್ರಯುಕ್ತ ರಾಜ್ಯಮಟ್ಟದ ಭಜನಾಮೇಳ, ರೈತರಿಗೆ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ತಾಂತ್ರಿಕತೆ ಬಗ್ಗೆ ಮಾಹಿತಿ ನೀಡಲು ಕೃಷಿ ಮೇಳ, ಕರಕುಶಲ ಕೈಮಗ್ಗ, ಗೃಹೋಪಯೋಗಿ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಿಂದ ವಿವಿಧ ಜಾತಿಯ ಗಿಡಮೂಲಿಕೆ ಸಸಿಗಳ ವಿತರಣೆ, ಚಿತ್ರಸಂತೆ, ಸ್ಥಳದಲ್ಲೇ ಚಿತ್ರ ರಚಿಸುವ ರಾಜ್ಯಮಟ್ಟದ ಸ್ಪರ್ಧೆ, ಸಾಮೂಹಿಕ ವಿವಾಹ, ಕುಸ್ತಿ ಪಂದ್ಯಾವಳಿ, ದೇಶಿ ಆಟಗಳು, ಗ್ರಾಮೀಣ ಆಟಗಳ ಸ್ಪರ್ಧೆ ಸೇರಿದಂತೆ ಸಾಂಸ್ಕೃತಿಕ ಮೇಳ ಕಾರ್ಯಕ್ರಮಗಳು, ಯಕ್ಷಗಾನ ಕಲಾ ತಂಡಗಳಿಂದ ಕಲಾ ಪ್ರದರ್ಶನಗಳು ಇನ್ನೂ ಹತ್ತು ಹಲವಾರು ಕಾರ್ಯಕ್ರಮಗಳು ನಡೆಯಲಿವೆ.

ಜ.16 ರಂದು ಶಿವಯೋಗಿ ಸಿದ್ದರಾಮ ಜಯಂತಿ

ಹಾಸನ : ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತ ಇಲಾಖೆ ವತಿಯಿಂದ ಶಿವಯೋಗಿ ಸಿದ್ದರಾಮ ಜಯಂತಿಯನ್ನು ಜ.16 ರಂದು ಬೆಳಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರ ಆವರಣದಲ್ಲಿ ಏರ್ಪಡಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿಗಳು ಹಾಗೂ ಲೋಕ ಸಭಾ ಸದಸ್ಯರಾದ ಹೆಚ್.ಡಿ. ದೇವೇಗೌಡ ಅವರು ಗೌರವಾನ್ವಿತ ಉಪಸ್ಥಿತಿ ವಹಿಸಲಿರುವರು. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವರಾದ ಎ.ಮಂಜು ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ. ಶಾಸಕರಾದ ಎಚ್.ಎಸ್. ಪ್ರಕಾಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಸಮಾರಂಭದ ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಉಪಸಭಾಪತಿಗಳಾದ ಮರಿತಿಬ್ಬೇಗೌಡ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಬಿ.ಎಸ್. ಶ್ವೇತಾ ದೇವರಾಜ್, ವಿಧಾನಸಭೆ ಶಾಸಕರಾದ ಹೆಚ್.ಡಿ. ರೇವಣ್ಣ, ಹೆಚ್.ಕೆ. ಕುಮಾರಸ್ವಾಮಿ, ವೈ.ಎನ್. ರುದ್ರೇಶಗೌಡರು, ಕೆ.ಎಂ.ಶಿವಲಿಂಗೇಗೌಡರು, ಸಿ.ಎನ್. ಬಾಲಕೃಷ್ಣ, ವಿಧಾನ ಪರಿಷತ್ ಸದಸ್ಯರಾದ ಎಂ.ಎ. ಗೋಪಾಲಸ್ವಾಮಿ, ಕೆ.ಟಿ. ಶ್ರೀ ಕಂಠೇಗೌಡ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಹೆಚ್.ಪಿ. ಮೋಹನ್, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಎಂ.ಆರ್. ವೆಂಕಟೇಶ್ ಉಪಸ್ಥಿತರಿರುವರು.

ಹೊ.ನ.ಪುರ ಪುರಸಭೆ: ಕಾಟಾಚಾರದ ಬಜೆಟ್ ಪೂರ್ವ ಭಾವಿ ಸಭೆ

ಸರ್ಕಾರದ ನಿರ್ದೇಶನ ಪಾಲಿಸುವುದಕ್ಕಷ್ಟೆ ಸೀಮಿತ

ಹೊಳೆನರಸೀಪುರ : ಸ್ಥಳೀಯ ಜೆ.ಡಿ.ಎಸ್. ನೇತೃತ್ವದ ಪುರಸಭೆ ಆಡಳಿತ ಮತ್ತು ಅಧಿಕಾರಿ ವರ್ಗ ಬಜೆಟ್ ಪೂರ್ವ ಭಾವಿ ಸಭೆಗೆ ಪಟ್ಟಣದ ಪ್ರಗತಿಪರ ಸಂಘಟನೆಗಳ ಮುಖ್ಯಸ್ಥರು, ಹಾಗೂ ಪ್ರಮುಖ ನಾಗರಿಕರನ್ನು ಆಹ್ವಾನಿಸದೆ ಬುಧವಾರ ಕಾಟಾಚಾರಕ್ಕೆ ಸಭೆ ನಡೆಸಿದೆ ಎಂದು ತಿಳಿದು ಬಂದಿದೆ.

ಅಧಿಕೃತ ಬಜೆಟ್ ಮಂಡಿಸುವ ಮುನ್ನ ತಾತ್ಕಾಲಿಕವಾಗಿ ಸಿದ್ದಪಡಿಸಿದ ವಾರ್ಷಿಕ ಆಯವ್ಯಯದ ಕರಡು ಪ್ರತಿಯ ವಿವರವನ್ನು ಬಜೆಟ್ ಪೂರ್ವಭಾವಿ ಸಭೆಯಲ್ಲಿ ತಂದು ಅದನ್ನು ಸಭೆಯಲ್ಲಿಟ್ಟು ಚರ್ಚಿಸಿ ಪ್ರಮುಖರ ಸಲಹೆ ಸೂಚನೆಗಳನ್ನು ಪಡೆದು ಲೋಪದೋಷಗಳನ್ನು ಸರಿಪಡಿಸಿಕೊಂಡು ನಂತರ ಪುರಸಭೆಯಲ್ಲಿ ಅಧಿಕೃತ ಬಜೆಟ್ ಮಂಡಿಸುವುದು ವಾಡಿಕೆ ಮತ್ತು ನಿಯಮ. ಆದರೆ ಈ ಬಾರಿ ವಿವರವುಳ್ಳ ಬಜೆಟ್ ಕರಡು ಪ್ರತಿಯನ್ನು ನೀಡದೆ ನಿಯಮವನ್ನು ಗಾಳಿಗೆ ತೂರಿದ್ದಾರೆ.

ಪುರಸಭೆ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿಗಳು ಸರ್ಕಾರದ ನಿಯಮಗಳನ್ನು ಸರಿಯಾಗಿ ಪಾಲಿಸದೆ ಸರ್ಕಾರದ ನಿರ್ದೇಶನದಂತೆ ಕೇವಲ ಕಾಟಾಚಾರಕಷ್ಟೆ ಬಜೆಟ್ ಪೂರ್ವಭಾವಿ ಸಭೆ ನಡೆಸಿ ಕೈತೊಳೆದುಕೊಂಡಿದ್ದಾರೆಂದು ಈ ಸಭೆಗೆ ಹೋಗಿದ್ದ ಪ್ರಮುಖ ವ್ಯಕ್ತಿಯೊಬ್ಬರು ಪತ್ರಿಕೆಗೆ ತಿಳಿಸಿದ್ದಾರೆ.



ಮಹತ್ವವುಳ್ಳ ಪೂರ್ವ ಬಜೆಟ್ ಪೂರ್ವಭಾವಿ ಸಭೆಗೆ ಜನರು ಭಾಗವಹಿಸಲು ಪಟ್ಟಣದಲ್ಲಿ ಯಾವುದೇ ರೀತಿಯ ಪ್ರಚಾರ ಮಾಡಿಲ್ಲ. ಪ್ರಸಾರ ಸಂಖ್ಯೆ ಜಾಸ್ತಿ ಇರುವ ಪತ್ರಿಕೆಗಳಲ್ಲೂ ಸಾರ್ವಜನಿಕ ಪ್ರಕಟಣೆ ನೀಡಿಲ್ಲ. ಬಹುತೇಕ ಜನರಿಗೆ ಹಾಗೂ ಓದುಗರಿಗೆ ಹೆಚ್ಚು ಪರಿ ಚಯವಿಲ್ಲದೆ ಮಿತ ಪ್ರಮಾಣದ ಪ್ರಸಾರವಿರುವ ಜಿಲ್ಲಾ ದಿನಪತ್ರಿಕೆಯೊಂದರಲ್ಲಿ ಪ್ರಕಟಣೆ ಹಾಕಿಸಿ ಜವಾಬ್ದಾರಿಯಿಂದ ನುಣಚಿಕೊಂಡಿರುವುದನ್ನು ನೋಡಿದರೆ ಹೆಚ್ಚಿನ ಸಂಖ್ಯೆಯಲ್ಲಿ ಈ ಸಭೆಗೆ ಪಟ್ಟಣದ ಜನರು ಭಾಗವಹಿಸಬಾರದೆಂಬ ದುರುದ್ದೇಶವನ್ನು ಪುರಸಭೆಯ ಅಧಿಕಾರಿ ವರ್ಗ ಹೊಂದಿರುವುದು ಕಂಡು ಬರುತ್ತದೆ ಅಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ.

ಸಭೆಯಲ್ಲಿ ಓರ್ವ ಪಕ್ಷೇತರ ಸದಸ್ಯ ಓರ್ವ ಕಾಂಗ್ರೆಸ್ ಸದಸ್ಯ, ಹಾಗೂ ಆಡಳಿತ ಪಕ್ಷದ ಜೆ.ಡಿ.ಎಸ್.ನ ಐದಾರು ಮಂದಿ ಸದಸ್ಯರು ಭಾಗವಹಿಸಿದ್ದರೆ ವಿನಃ ಆಡಳಿತ ಪಕ್ಷದ ಬಹುತೇಕ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ. ಇನ್ನು ಸಲಹೆ ಸೂಚನೆಗಳನ್ನು ನೀಡಲು ತಾತ್ಕಾಲಿಕ ಕರಡು ಪ್ರತಿಯಲ್ಲಿನ ಲೋಪದೋಷಗಳ ಬಗ್ಗೆ ಹಾಗೂ ಪಟ್ಟಣದ ಸಮಸ್ಯೆಗಳ ಪರಿಹಾರ, ಅಭಿವೃದ್ಧಿ ಮತ್ತಿತರ ನಾಗರಿಕ ಸೌಲಭ್ಯಗಳಿಗೆ ಅಗತ್ಯ, ಹಣ ಮೀಸಲಿಡಬೇಕೆಂಬುದರ ಕುರಿತಾದ ವಿಷಯಗಳ ಬಗ್ಗೆ ಹಾಜರಿದ್ದ ಸದಸ್ಯರು ಗಂಭೀರ ಚರ್ಚೆ ನಡೆಸಿದ್ದಾಗಲಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿದ್ದಾಗಲಿ ಕಂಡುಬಂದಿಲ್ಲ ಇನ್ನೂ ಸಭೆಯಲ್ಲಿ ಆಡಳಿತ (ಜೆ.ಡಿ.ಎಸ್.) ಪಕ್ಷದ ಇಬ್ಬರು, ಪುರಸಭೆ ಮಾಜಿ ಅಧ್ಯಕ್ಷರು, ಒಂದಿಬ್ಬರು ಪ್ರಮುಖ ವ್ಯಕ್ತಿಗಳು ಸೇರಿದಂತೆ ಆಪಕ್ಷಕ್ಕೆ ಸೀಮಿತರಾದ 15-20 ಮಂದಿ ಜನರಷ್ಟೆ ಬಾಗವಹಿಸಿದ್ದು ಕಂಡು ಬಂತೇ ವಿನಃ ಯಾವುದೇ ರಾಜಕೀಯ ಪಕ್ಷದ ಮುಖಂಡರು, ಸಂಘ ಸಂಸ್ಥೆಗಳ ಮುಖ್ಯಸ್ಥರು ನಾಗರಿಕ ಬಂಧುಗಳು ಅಷ್ಟಾಗಿ ಇರಲಿಲ್ಲ.

ಇತರೆ ಒಂದಿಬ್ಬರು ನಾಗರಿಕರು ಕೆಲ ವಿಷಯಗಳನ್ನು ಸಭೆಯ ಗಮನಕ್ಕೆ ತಂದು ಚರ್ಚಿಸಿದ್ದಲ್ಲದೆ ಸಮಸ್ಯೆಗಳ ಪರಿಹಾರಕ್ಕೆ ಸಲಹೆ ಸೂಚನೆಗಳನ್ನು ನೀಡಿದ್ದನ್ನು ಹೊರತು ಪಡಿಸಿ ಸಭೆಯಲ್ಲಿ ಉಳಿದವರ್ಯಾರು ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿದ್ದಾಗಲಿ, ಚರ್ಚಿಸಿದ್ದಾಗಲಿ ಕಾಣಲಿಲ್ಲ. ಕೇವಲ ಕಾಟಾಚಾರಕ್ಕೆ ಬಜೆಟ್ ಪೂರ್ವಭಾವಿ ಸಭೆ ಸೀಮಿತವಾದಂತಿತ್ತು. ಯಾವ ಪುರುಷಾರ್ಥಕ್ಕೆ ಅಧ್ಯಕ್ಷರು ಮತ್ತು ಅಧಿಕಾರಿಗಳು ಸಭೆ ನಡೆಸಿದರು ಎಂಬುದು ಗೊತ್ತಿಲ್ಲ. ಆದರೆ ತಮಗೆ ಗೊತ್ತಿರುವಂತೆ ಅಧಿಕೃತ ಬಜೆಟ್ ಮಂಡನೆ ಮಾಡುವ ಮುನ್ನ ಪುರಸಭೆ ಅಧ್ಯಕ್ಷತೆಯಲ್ಲಿ ಸಾರ್ವಜನಿಕರ ಸಭೆ ಕರೆದು ತಾತ್ಕಾಲಿಕ ಬಜೆಟ್‌ನ ವಿವರಗಳ ಬಗ್ಗೆ ಅವರೊಂದಿಗೆ ಚರ್ಚಿಸಿ ಸಲಹೆ ಸೂಚನೆಗಳನ್ನು ಪಡೆದು ನಂತರ ಮಾರ್ಪಾಡು ಮಾಡಿದ ಅಧಿಕೃತ ಬಜೆಟ್‌ನ್ನು ಪುರಸಭೆಯ ಬಜೆಟ್ ಸಭೆಯಲ್ಲಿ ಮಂಡಿಸಬೇಕೆಂಬ ಸರ್ಕಾರದ ನಿರ್ದೇಶನ ಪಾಲಿಸುವುದಕ್ಕಷ್ಟೆ ನಾಮಕವಸ್ತೆಯ ಬಜೆಟ್ ಪೂರ್ವ ಭಾವಿ ಸಭೆಯನ್ನು ಬುಧವಾರ ನಡೆಸಲಾಗಿದೆ ಎಂದು ಸಭೆಯಲ್ಲಿ ಭಾಗವಹಿಸಿದ್ದ ಆರ್.ಟಿ.ಐ.ಕಾರ್ಯಕರ್ತರೊಬ್ಬರು ಪತ್ರಿಕೆಗೆ ತಿಳಿಸಿದ್ದಾರೆ.

ಮೊಬೈಲ್ ಹ್ಯಾಂಡ್‌ಸೆಟ್ ರಿಪೇರಿ ತರಬೇತಿಗೆ ಅರ್ಜಿ ಆಹ್ವಾನ

ಹಾಸನ : ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ಜನವರಿ 2018 29ನೇ ತಾರೀಖಿನಿಂದ ಮೊಬೈಲ್ ಹ್ಯಾಂಡ್‌ಸೆಟ್ ರಿಪೇರಿ ತರಬೇತಿ ಪ್ರಾರಂಭವಾಗಲಿದೆ. ಈ ತರಬೇತಿಯನ್ನು ನುರಿತ ಉಪನ್ಯಾಸಕರಿಂದ ಮಾಡಿಸಲಾಗುತ್ತದೆ ಹಾಗೂ ತರಬೇತಿ ಸಂದರ್ಭದಲ್ಲಿ ಉದ್ಯಮಶೀಲತ ಹಾಗೂ ವ್ಯಕ್ತಿತ್ವ ವಿಕಸನ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿ ಪಡೆಯಲು ಆಸಕ್ತಿಯಿರುವಂತಹ 18 ರಿಂದ 45 ರ ವಯೋಮಿತಿಯ ನಿರುದ್ಯೋಗ ಯುವಕರು ಹಾಗೂ ಯುವತಿಯರು ಅರ್ಜಿ ಸಲ್ಲಿಸಬಹುದು.

ತರಬೇತಿಯು ಊಟ ಮತ್ತು ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿರುತ್ತದೆ. ಅರ್ಜಿಯನ್ನು ಸಲ್ಲಿಸುವವರು ಸಂಸ್ಥೆಯ ಇ-ಮೇಲ್‌ಗೆ ಅಥವಾ ಸಂಸ್ಥೆಯಿಂದ ಅರ್ಜಿ ಪಡೆದು ನೇರವಾಗಿ ಸಂಸ್ಥೆಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ; ಫೋನ್ :08172-297013, 7353654000, 8147903497, 8861818380.

ಸೇತುವೆಗಳ ನಿರ್ಮಾಣಕ್ಕೆ 4 ಕೋ. ರೂ ಮಂಜೂರು

ಬೇಲೂರು:ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿನ ಸೇತುವೆಗಳ ನಿರ್ಮಾಣಕ್ಕಾಗಿ ಸರ್ಕಾರದಿಂದ ಒಟ್ಟು 4 ಕೋಟಿ ರೂಗಳು ಮಂಜೂರಾಗಿದೆ ಎಂದು ಶಾಸಕ ವೈ.ಎನ್.ರುದ್ರೇಶ್‌ಗೌಡ ಹೇಳಿದರು.

ಪಟ್ಟಣ ಸಮೀಪದ ಕಳಸಿನಕೆರೆ ಏರಿ ಮೇಲಿರುವ ಹಳೆ ಸೇತುವೆ ಪುನರ್ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಈಗಾಗಲೆ ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ದಿ ಕೆಲಸಗಳನ್ನು ಮಾಡಲಾಗಿದೆ. ಅಲ್ಲದೆ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕ್ಷೇತ್ರದ ಕಳಸಿನ ಕೆರೆ ಸೇತುವೆ ನಿರ್ಮಾಣಕ್ಕೆ 1 ಕೋಟಿ ರೂಗಳಲ್ಲಿ ಕೆಲಸ ಮಾಡಿಸಲಾಗುತ್ತಿದೆ. ಉಳಿದ ಹಣದಲ್ಲಿ ಹನಿಕೆ-ಕೆಬಿಹಾಳ್ ರಸ್ತೆ ಸೇತುವೆ, ಚಿನ್ನೇನಹಳ್ಳಿ ಮೂಲಕ ಚಿಕ್ಕಮಗಳೂರು ಸಂಪರ್ಕ ಸೇತುವೆ, ಹಾಗೂ ಬೇಲೂರು ಸೋಮವಾರಪೇಟೆ ಸಂಪರ್ಕ ಸೇತುವೆಗಳನ್ನು ನಿರ್ಮಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿರುವ ಇನ್ನೂ ಹಲವಾರು ಸೇತುವೆಗಳ ಪುನರ್ ನಿರ್ಮಾಣಕ್ಕೆ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಕೆಲಸ ಮಾಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಖಾದಿ ಗ್ರಾಮೋದ್ಯೋಗ ಮಂಡಳಿ ನಿರ್ದೇಶಕ ವೈ.ಎನ್.ಕೃಷ್ಣೇಗೌಡ, ಸಾಹಿತಿ ಕೃಷ್ಣಮೂರ್ತಿ, ಇಂಜಿನಿಯರ್ ಸೋಮಶೇಖರ್, ಮುಖಂಡರಾದ ಲಿಂಗೇಶ್, ಪುಟ್ಟಸ್ವಾಮಿ, ತೀರ್ಥ ಕುಮಾರ್, ಮಂಜುನಾಥ್, ಲಕ್ಷ್ಮಣ್, ದೇವರಾಜು, ನಿಂಗಣ್ಣ ಇನ್ನಿತರರಿದ್ದರು.

ನಗರದ ಸ್ವಚ್ಛತೆಗಾಗಿ ಮೊಬೈಲ್ ಆ್ಯಪ್

ಹಾಸನ: ಕೇಂದ್ರ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಸ್ವಚ್ಛ್‌ಭಾರತ್ ಮಿಷನ್ ಅಡಿಯಲ್ಲಿ ಜ.4 ರಿಂದ ಸ್ವಚ್ಛ ಸರ್ವೇಕ್ಷಣೆ ಅಭಿಯಾನ ನಡೆಯುತಿದ್ದು ದೇಶದ ನಗರಗಳಿಗೆ ಸ್ವಚ್ಛ ನಗರಕ್ಕಾಗಿ ಶ್ರೇಣಿಯನ್ನು ನೀಡಲಾಗುತ್ತಿದೆ, ಅದರಲ್ಲಿ ಹಾಸನ ನಗರಕ್ಕೆ ಉತ್ತಮ ಶ್ರೇಣಿ ಪಡೆಯಲು ತಮ್ಮ ಸಹಕಾರ ಅತ್ಯಂತ ಮಹತ್ವವಾಗಿದ್ದು ಆದ್ದರಿಂದ ಸ್ವಚ್ಛಸರ್ವೇಕ್ಷಣ-2018 ರವೆಬ್ ಸೈಟ್ ನಲ್ಲಿ ಸಿಟಿಜನ್ ಪೀಡ್ ಬ್ಯಾಕ್‌ನಲ್ಲಿ ಅಭಿಪ್ರಾಯವನ್ನು ಹೆಚ್ಚಾಗಿ ನೊಂದಾಯಿಸಲು ಕೋರಲಾಗಿದೆ ಅದರೊಂದಿಗೆ ಸ್ವಚ್ಚತಾ ಆಪ್ ಅನ್ನು ತಮ್ಮ ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಕಸ ಇರುವ ಸ್ಥಳಗಳ ಛಾಯಾ ಚಿತ್ರ ಅಪ್ಲೋಡ್ ಮಾಡಿದಲ್ಲಿ ನಗರಸಭೆಯಿಂದ ಸ್ವಚ್ಚಗೊಳಿಸಲು ಸಹಕಾರಿಯಾಗುತ್ತದೆ. ಸ್ವಚ್ಚ ಸರ್ವೇಕ್ಷಣ-2018 ಅಭಿಯಾನದಲ್ಲಿ ಸಾರ್ವ ಜನಿಕರು ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳಲು ಸ್ವಚ್ಚ ಹಾಸನದ ಪರಿಕಲ್ಪನೆಗೆ ಸಹಕಾರ ನೀಡಬೇಕಾಗಿ ಕೋರಲಾಗಿದೆ.

ಕನ್ನಡದ ಚೇತನ ಶಕ್ತಿ ಕುವೆಂಪು

ಉದಯಪುರ: ಕನ್ನಡ ಭಾಷೆಯ ಚೇತನ ಶಕ್ತಿ ಕುವೆಂಪು ಎಂದು ಸಾಹಿತಿ ಚಿನ್ನೇನಹಳ್ಳಿಸ್ವಾಮಿ ಬಣ್ಣಿಸಿದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗದ ವತಿಯಿಂದ ವಿಶ್ವಮಾನವ ಕುವೆಂಪು ಜನ್ಮ ದಿನಾಚರಣೆ ಪ್ರಯುಕ್ತ ಏರ್ಪಡಿಸಲಾಗಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಕುವೆಂಪು ಕೇವಲ ವ್ಯಕ್ತಿಯಾಗಿರಲಿಲ್ಲ ಶಕ್ತಿಯಾಗಿದ್ದರು. ದ.ರಾ. ಬೇಂದ್ರೆಯವರ ಅಭಿಪ್ರಾಯದಂತೆ, ಅವರು ಯುಗದ ಕವಿ, ಜಗದ ಕವಿಯಾಗಿದ್ದರು ಎಂದು ಹೇಳಿದರು. ಹುಟ್ಟುವ ಪ್ರತಿ ಮಗವು ವಿಶ್ವಮಾನವನಾಗಿ ಹುಟ್ಟುತ್ತದೆ. ಆದರೆ ಅವನನ್ನು ನಾವು ಅಲ್ಪ ಮಾನವನನ್ನಾಗಿ ಮಾಡುತ್ತಿದ್ದೇವೆ. ಮತ್ತೆ ವಿಶ್ವಮಾನವನನ್ನಾಗಿ ಮಾಡುವ ವ್ಯಕ್ತಿಗಳ ಕೊರತೆಯಿಂದ ಯುವ ಜನಾಂಗ ದಾರಿ ತಪ್ಪುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಶಿವಕುಮಾರ.ಸಿ.ಎಲ್ ಮಾತನಾಡಿ, ಕುವೆಂಪು 20ನೇ ಶತಮಾನ ಕಂಡ ಅದ್ಭುತ ದಾರ್ಶನಿಕ ಕವಿ ತಮ್ಮ ಬರಹದ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದಿದ ಕವಿ. ಸಾಹಿತ್ಯ ವಾಚಕರ ಮನ್ಮಥ, ಮಹಾಮಾ ನವತಾವಾದಿ ಬಸವಣ್ಣವ ನರಂತೆ, ವಿಶ್ವಮಾನವ ಸಂದೇಶ ಸಾರಿದ ಕವಿ ಕುವೆಂಪು ಎಂದು ಹೇಳಿ ದರು.ಕನ್ನಡ ವಿಭಾಗದ ಮುಖ್ಯಸ್ಥರಾದ ಪೂರ್ಣಿ ಮ ಹೆಚ್.ವಿ. ಪ್ರಾಸ್ತಾವಿ ಕವಾಗಿ ಮಾತನಾಡಿದರು. ನಂದೀಶ್, ಹನುಮಂತಯ್ಯ, ಪ್ರೊ. ರೂಪ, ಗೀತಾ, ಗಂಗಾಧರಯ್ಯ, ಮಧು ಸೂದನ್, ಮೋಹನ ಕುಮಾರ, ರಘು, ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ತನುಜ ಪ್ರಾರ್ಥಿಸಿದರೆ, ಸರಸ್ವತಿ ವಂದಿಸಿದರು. ಧನಲಕ್ಷ್ಮಿ ಕಾರ್ಯಕ್ರಮ ನಿರೂ ಪಿಸಿದರು.

ಸಾಲಭಾದೆ - ರೈತ ಆತ್ಮಹತ್ಯೆ

ಕೊಣನೂರು : ಜಮೀನಿನಲ್ಲಿ ಬೆಳೆದ ಹೊಗೆಸೊಪ್ಪು, ಶುಂಠಿ ಹಾಗೂ ಜೋಳದ ಬೆಳೆಗಳು ಕೈಗೆ ಬಾರದ ಪರಿಣಾಮ, ಬೆಳೆ ಬೆಳೆಯಲು ಹಾಗೂ ಮಗಳ ಮದುವೆಗಾಗಿ ಮಾಡಿದ್ದ ಸಾಲ ತೀರಿಸಲು ಸಾಧ್ಯವಾಗಿದೆ ನೊಂದ ರೈತ ಜಮೀನಿನ ಬಳಿಯೇ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಅರಕಲಗೂಡು ತಾಲೂಕು ಮಲ್ಲಿಪಟ್ಟಣ ಹೋಬಳಿಯ ಹೆಣ್ಣೂರು ಕೊಂಗಳಲೆ ಗ್ರಾಮದಲ್ಲಿ ನಡೆದಿದೆ.

ಮಲ್ಲೇಶ (50) ಮೃತ ವ್ಯಕ್ತಿ. ಮೃತ ಮಲ್ಲೇಶ ರವರು ತಮ್ಮ ತಂದೆ ರಂಗೇಗೌಡ ರವರ ಹೆಸರಿನಲ್ಲಿದ್ದ 3 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಲು ದೊಡ್ಡಬೆಮ್ಮತ್ತಿ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ 3.25 ಲಕ್ಷ ರೂ ಮತ್ತು ಮಗಳ ಮದುವೆಗಾಗಿ ಕೈಸಾಲವಾಗಿ 5.50 ಲಕ್ಷರೂ, ಸಂಘದಲ್ಲಿ 70 ಸಾವಿರ ಸಾಲ ಮಾಡಿದ್ದರು. ಹೊಗೆಸೊಪ್ಪು ಶುಂಠಿ ಮತ್ತು ಜೋಳದ ಬೆಳೆ ಗಳು ಸಕಾಲಕ್ಕೆ ಮಳೆಯಿಲ್ಲದೇ, ನೀರಿಲ್ಲದೇ ಹಾಳಾಗಿದ್ದು ಸಾಲ ತೀರಿ ಸಲು ಸಾಧ್ಯವಾ ಗುವುದಿಲ್ಲ ಎಂದು ಮನನೊಂದು ಜಮೀನಿಗೆ ಹೋದವರು ಅಲ್ಲಿಯೇ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು ನಂತರ ಜಮೀನಿಗೆ ಹೋದ ತಮ್ಮ ರವಿ ನೋಡಿ ಮನೆಯವರಿಗೆ ತಿಳಿಸಿದ್ದಾನೆ ಎಂದು ಮೃತರ ತಂದೆ ರಂಗೇಗೌಡ ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ರಕ್ತದಾನ ಮಾಡುವುದರ ಮೂಲಕ ಮಾನವೀಯತೆ ಮೆರೆಯಿರಿ

ಕೊಣನೂರಿನ:ರಕ್ತದಾನ ಮಹಾದಾನವಾಗಿದ್ದು ರಕ್ತಕ್ಕೆ ಪರ್ಯಾಯವಾದ ವಸ್ತುವಿಲ್ಲದಿರುವುದರಿಂದ ತುರ್ತು ರಕ್ತದ ಅವಶ್ಯಕತೆ ಇರುವವರಿಗೆ ರಕ್ತದಾನ ಮಾಡುವುದರ ಮೂಲಕ ಮಾನವೀಯತೆ ಮೆರೆಯಬೇಕು ಎಂದು ಲಯನ್ಸ್ ಸಂಸ್ಥೆಯ ಅಧ್ಯಕ್ಷ ಕೆ.ವಿ. ಸತೀಶ್ ತಿಳಿಸಿದರು.

ಕೊಣನೂರಿನ ಬಿ.ಎಂ.ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಕಾಲೇಜಿನ ರೆಡ್ ಕ್ರಾಸ್ ಘಟಕ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಲಯನ್ಸ್ ಮತ್ತು ಲಯನೆಸ್ ಸೇವಾ ಸಂಸ್ಥೆ ಕೊಣನೂರು, ಹಾಗೂ ಹಾಸನಾಂಬ ದಂತ ವೈದ್ಯಕೀಯ ವಿದ್ಯಾಲಯ ಹಾಸನ ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಉಚಿತ ರಕ್ತಗುಂಪು ಪರೀಕ್ಷೆ ಹಾಗೂ ದಂತ ತಪಾಸಣಾ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕಳಕಳಿ ಹಾಗೂ ಸೇವಾ ಮನೋಭಾವನೆ ಮೂಡಬೇಕು ಎಂಬ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೇವೆ. ಇದರಿಂದ ವಿದ್ಯಾರ್ಥಿಗಳು ಅಕ್ಷರ ಜ್ಞಾನದೊಂದಿಗೆ ಸೇವಾ ಜ್ಞಾನವನ್ನೂ ಬೆಳೆಸಿಕೊಳ್ಳಿ ಎಂದರು.

ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಹಾಗೂ ರೆಡ್ ಕ್ರಾಸ್ ಘಟಕದ ಸಂಚಾಲಕ ಬಿ.ಎನ್. ಲಕ್ಷ್ಮೀಶ್ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ನಮ್ಮ ಕಾಲೇಜಿನಲ್ಲಿ ಸತತ ನಾಲ್ಕು ವರ್ಷಗಳಿಂದ ಈ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದು ಮುಂದಿನ ದಿನಗಳಲ್ಲಿ ರಕ್ತದಾನ ಶಿಬಿರವನ್ನೂ ಆಯೋಜಿಸಲಾಗುವುದು ಇಂತಹ ಶಿಬಿರಗಳ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಬಸವರಾಜ್, ಹಾಸನಾಂಬ ದಂತ ವೈದ್ಯ ಕಾಲೇಜಿನ ವೈದ್ಯ ಡಾ. ಪ್ರವೀಣ್, ಸಿಡಿಸಿ ಉಪಾಧ್ಯಕ್ಷ ಕೆ.ಎ. ಶ್ರೀಧರ್ ಮುಂತಾದವರು ಮಾತನಾಡಿದರು. ಲಯನ್ಸ್ ಸಂಸ್ಥೆಯ ಕಾರ್ಯದರ್ಶಿ ರಾಮಪ್ರಸಾದ್ ಹಿರಿಯ ಸದಸ್ಯ ವಿ. ಅಬೂಬಕರ್,ಸದಸ್ಯ ಸತೀಶ್, ಲಯನೆಸ್ ಸಂಸ್ಥೆಯ ಅಧ್ಯಕ್ಷೆ ವಸಂತರಾಜು, ಖಜಾಂಚಿ ಮಣಿನಾಗೇಶ್, ಸದಸ್ಯೆ ಸೀಮಾಹನೀಫ್ ಕಾಲೇಜಿನ ಪ್ರಾಧ್ಯಾಪಕರುಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶ್ರೀ ಚುಕ್ಕಿ ರಂಗನಾಥಸ್ವಾಮಿ ಮಕರಸಂಕ್ರಾಂತಿ

ಹಾಸನ: ಜ. 14 ರಿಂದ 16ರವರೆಗೆ ಮಕರ ಸಂಕ್ರಾಂತಿ ಪ್ರಯುಕ್ತ ತಾಲ್ಲೂಕು ದುದ್ದ ಹೋಬಳಿಯ ತಿರುಪತಿಹಳ್ಳಿಯಲ್ಲಿ ಶ್ರೀ ಚಿಕ್ಕಗಿರಿ ರಂಗನಾಥಸ್ವಾಮಿಯವರ ಮಕರ ಸಂಕ್ರಾಂತಿ ಉತ್ಸವ ಹಾಗೂ ರಥೋತ್ಸವ ಕಾರ್ಯಕ್ರಮ ನಡೆಯಲಿದೆ. ಜ. 14ರ ಬೆಳಿಗ್ಗೆ ಮೂಲ ಸನ್ನಿಧಿಯಲ್ಲಿ ನವಗ್ರಹ ಪೂಜೆ, ದ್ವಜಾರೋಹಣ, ಗಂಗಾಪೂಜೆ, ಪುಣ್ಯಃ, ಪಂಚಕಳಸ ಸ್ಥಾಪನೆ, ರುದ್ರಾಭಿಷೇಕ. ರಾತ್ರಿ ಕುದುರೆ ಮತ್ತು ಗರುಡ ವಾಹನೋತ್ಸವ, ನೀರುಗುಂದದ ಶ್ರೀ ಸಿದ್ದೇಶ್ವರ ಸ್ವಾಮಿಯವರ ಉತ್ಸವ ನಡೆಯುವುದು. ಜ. 15ರ ಬೆಳಿಗ್ಗೆ ಕಳಸ ಸ್ಥಾಪನೆ ಹಾಗು ಮಹಾಮಂಗಳಾರತಿ ನಂತರ ರಥೋತ್ಸವ ನಡೆಯುತ್ತದೆ. ಸಂಜೆ 6 ಗಂಟೆಗೆ ಬೆಳ್ಳಿ ರಥೋತ್ಸವ, ಮತ್ತು ರಾತ್ರಿ 10ಗಂಟೆಗೆ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಜ. 16ರ ಬೆಳಗ್ಗೆ 11 ಗಂಟೆಗೆ ಶ್ರೀ ಬೂತಪ್ಪನವರ ಹರಿಸೇವೆ ಹಾಗೂ ಹಗಲು ಜಾತ್ರೆ ನಡೆಯುತ್ತದೆ.

ಸವಲತ್ತು ಪಡೆದು ಸಾಧನೆ ಮಾಡಲು ಸಲಹೆ

ಬೇಲೂರು: ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಜೀವನದಲ್ಲಿ ಉತ್ತಮ ಸಾಧನೆ ಮಾಡುವುದಕ್ಕೆ ಮುಂದಾಗಬೇಕು ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಆರ್.ವೆಂಕಟೇಶ್ ಹೇಳಿದರು.

ಪಟ್ಟಣ ಸಮೀಪದ ವೈಡಿಡಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಸರ್ಕಾರದ ಲ್ಯಾಪ್‌ಟಾಪ್‌ಗಳನ್ನು ವಿತರಿಸಿ ಮಾತನಾಡಿದ ಅವರು ರಾಜ್ಯ ಸರ್ಕಾರ ಬಡವರು, ಹಿಂದುಳಿದವರ ಹಾಗೂ ದಲಿತರ ಅಭಿವೃದ್ದಿಗಾಗಿ ಹಲವಾರು ಯೋಜನೆಗಳನ್ನು ತರುವ ಮೂಲಕ ಹಿಂದೆ ಯಾವ ಸರ್ಕಾರ ಮಾಡದ ಕೆಲಸಗಳನ್ನು ಮಾಡಿ ಇತಿಹಾಸ ನಿರ್ಮಿಸಿದೆ. ಮುಖ್ಯ ಮಂತ್ರಿಗಳು ಎಲ್ಲ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾಸಿರಿ ಯೋಜನೆ ಜಾರಿಗೆ ತಂದು ಅನುಕೂಲ ಕಲ್ಪಿಸಿದ್ದಾರೆ. ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು. ಇಂದು ಲ್ಯಾಪ್‌ಟಾಪ್ ಪಡೆಯುತ್ತಿರುವ ವಿದ್ಯಾರ್ಥಿಗಳು ಕುಳಿತಲ್ಲಿಯೆ ಪ್ರಪಂಚದ ಎಲ್ಲ ವಿದ್ಯಮಾನಗಳನ್ನು ತಿಳಿಯುವ ಮೂಲಕ ಉತ್ತಮ ಜ್ಞಾನವನ್ನು ಪಡೆದು ಉತ್ತಮ ಸಾಧನೆ ಮಾಡುವುದಕ್ಕೆ ಮುಂದಾಗಬೇಕು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಸತಿ ನಿಲಯ ಗಳು ಸೇರಿದಂತೆ ಮೂಲಭೂತ ಸೌಕರ್ಯ ಗಳನ್ನು ಕೊಡುವ ಮೂಲಕ ಕಾಲೇಜು ಮಾದರಿಯಾಗಿದೆ. ವಿಶೇಷವೆಂದರೆ ವೈಡಿಡಿ ಕಾಲೇಜು ಜಿಲ್ಲೆಯ ಲ್ಲಿಯೆ ಬೋಧನ ವರ್ಗದಲ್ಲಿ ಪ್ರಥಮ ಸ್ಥಾನದಲ್ಲಿದ್ದು, ಇಲ್ಲಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಿದ್ದು ಇದನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಶಾಸಕ ವೈ.ಎನ್. ರುದ್ರೇಶ್‌ಗೌಡ, ಖಾದಿ ಗ್ರಾಮೋದ್ಯೋಗ ಮಂಡಳಿ ನಿರ್ದೇಶಕ ಕೃಷ್ಣೇಗೌಡ, ಜಿಪಂ ಸದಸ್ಯ ತೌಫಿಕ್, ಸಾಹಿತಿ ಕೃಷ್ಣಮೂರ್ತಿ, ಪ್ರಾಂಶುಪಾಲ ಜಯಣ್ಣಗೌಡ, ಪಾಪಣ್ಣ, ವೆಂಕಟೇಶ್, ಉಪನ್ಯಾಸಕ ರಘು ಇದ್ದರು.

ಇಂದು ಗ್ರಹಣಗಳ ವೀಕ್ಷಣೆಯ ಕಾರ್ಯಾಗಾರ

ಹಾಸನ: ನಭೋಮಂಡಲದಲ್ಲಿ ಸಂಭವಿಸುವ ಖಗೋಳ ವಿದ್ಯಮಾನಗಳಲ್ಲೊಂದಾದ ಗ್ರಹಣಗಳ ಹಿಂದಿರುವ ವೈಜ್ಞಾನಿಕ ಸತ್ಯ ಮತ್ತು ಅವುಗಳನ್ನು ವೀಕ್ಷಿಸುವ ಬಗ್ಗೆ ಜ. 12 ರ ಶುಕ್ರವಾರದಂದು ಒಂದು ದಿನದ ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ ಎಂದು ಭಾರತ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಕಾರ್ಯದರ್ಶಿ ಮಮತಾಶಿವು ತಿಳಿಸಿದ್ದಾರೆ.

ಗ್ರಹಣಗಳು ಖಗೋಳ ವಿದ್ಯಮಾನಗಳಲ್ಲಿ ಒಂದಾಗಿದೆ. ಅಂದು ಖಗೋಳ ವಿಜ್ಞಾನಿಗಳಿಗೆ ಆಕಾಶ ಕಾಯಗಳ ಬಗ್ಗೆ ಅಧ್ಯಯನ ನಡೆಸಲು ಅಭೂತಪೂರ್ವ ಸಂದರ್ಭ. ಅಂದು ಅವರುಗಳಿಗೆ ಹಬ್ಬದ ಸಡಗರ. ಜನಸಾಮಾನ್ಯರು, ಈ ಹಬ್ಬದ ಸಡಗರದಲ್ಲಿ ಪಾಲ್ಗೊಳ್ಳಲು ಸೌರಮಂಡಲದ ಬಗೆಗಿನ ಜ್ಞಾನ ಅವಶ್ಯಕವಾಗಿದ್ದು, ಆಕಾಶದ ಚಪ್ಪರದಲ್ಲಿ ಸಂಭವಿಸುವ ಸೂರ್ಯಗ್ರಣ, ಚಂದ್ರಗ್ರಹಣ, ಉಲ್ಕಾಪಾತ, ಧೂಮಕೇತು ಮತ್ತು ಇತರೆ ವಿಷಯಗಳ ಬಗ್ಗೆ ತಿಳಿಸಲು ಒಂದು ದಿನದ ಕಾರ್ಯಾಗಾರವನ್ನು ನಗರದ ಉತ್ತರ ಬಡಾವಣೆಯ ಅರಳೀಕಟ್ಟೆ ಹತ್ತಿರ ಇರುವ ಭಾರತ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಸಂಪನ್ಮೂಲ ಕೇಂದ್ರದಲ್ಲಿ ಏರ್ಪಡಿಸಲಾಗಿದೆ. ಕಾರ್ಯಾಗಾರವು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ನಡೆಯಲಿದೆ.

ವಿಜ್ಞಾನ ಬರಹಗಾರ ಕೆ.ಎಸ್ ರವಿಕುಮಾರ್ ಮತ್ತು ಬಿಜಿವಿಎಸ್‌ನ ರಾಜ್ಯ ಉಪಾಧ್ಯಕ್ಷರಾದ ಹೆಚ್.ಎ. ಅಹಮದ್ ಉಪನ್ಯಾಸ ನೀಡಲಿದ್ದಾರೆ. ಪ್ರವೇಶವು ಉಚಿತವಾಗಿದ್ದು ಭಾಗವಹಿಸಲು ಇಚ್ಛಿಸುವವರು ಕಾರ್ಯಕ್ರಮದ ಸಂಚಾಲಕರಾದ ಕಾಂತರಾಜು(9986087274) ರವರನ್ನು ಸಂಪರ್ಕಿಸ ಬಹುದಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
KARNATAKA STATE ROAD TRANSPORT CORPORATION
ಹಾಸನ ವಿಭಾಗ, ಬಿ.ಎಂ. ರಸ್ತೆ, ಹಾಸನ

ಸಂ.ಕರಾರಸಾಹಾವಿ/ಸಂಚಾರ/ವಾಣಿಜ್ಯ: 1215/ 17-18 ದಿನಾಂಕ:09/01/2018

ಸಂಧಾನಕ್ಕೆ ಆಹ್ವಾನ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಹಾಸನ ವಿಭಾಗಕ್ಕೆ ಸೇರಿದ ಈ ಕೆಳಗೆ ನಮೂದಿಸಿದ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳನ್ನು ಪರವಾನಗಿ ನೀಡಲು ಉದ್ದೇಶಿಸಿ ಶಾಶ್ವತ ಮಳಿಗೆಗೆ 5ವರ್ಷ, ಮತ್ತು ತೆರೆದ ಜಾಗಕ್ಕೆ 3 ವರ್ಷ, ಹಾಲ್‌ಗಳಿಗೆ 10ವರ್ಷಗಳ ಅವಧಿಗೆ ಪರವಾನಗಿಯನ್ನು ನೀಡಲು ಅರ್ಜಿದಾರರನ್ನು ಸಂಧಾನಕ್ಕೆ ಕರೆಯಲಾಗಿದೆ. ಸಂಧಾನದಲ್ಲಿ ಯಶಸ್ವಿಯಾದವರು ಪಾವತಿಸುವ ಶುಲ್ಕಕ್ಕೆ ಪ್ರತಿ ವರ್ಷ ಶೇಕಡ 10 ರಷ್ಟು ಹೆಚ್ಚಿನ ಮಾಹೆಯಾನ ಪರವಾನಗಿ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ. ಅವಧಿ ಮುಗಿದ ನಂತರ ಹೊಸದಾಗಿ ಇ ಟೆಂಡರ್ ಕರೆದು ಪರವಾನಗಿದಾರರನ್ನು ಆಯ್ಕೆ ಮಾಡಲಾಗುವುದು. ಸಂಧಾನದಲ್ಲಿ ಭಾಗವಹಿಸುವವರು, ಸಂಸ್ಥೆಯು ನಿಗದಿಪಡಿಸಿದ ಇ.ಎಂ.ಡಿ. ಮತ್ತು ಟೆಂಡರ್ ಅರ್ಜಿ ಶುಲ್ಕವನ್ನು ಡಿ.ಡಿ. ರೂಪದಲ್ಲಿ ಕಛೇರಿಯ ಕೆಲಸದ ವೇಳೆಯಲ್ಲಿ ಈ ಕೆಳಗೆ ಸಹಿ ಮಾಡಿರುವವರ ಹೆಸರಿನಲ್ಲಿ ಪಾವತಿಸಿ ಅರ್ಜಿಯನ್ನು ಪಡೆಯಬಹುದಾಗಿದೆ.

ಕ್ರ ಸಂ	ಬಸ್ ನಿಲ್ದಾಣ	ವಾಣಿಜ್ಯ ಮಳಿಗೆಯ ಹೆಸರು	ಮಾಸಿಕ ಮಿತವ್ಯಯ ಶುಲ್ಕ	ಇ.ಎಂ.ಡಿ. ಮೊತ್ತ	ವಿಸ್ತೀರ್ಣ (ಚದರ ಅಡಿ ಗಳಲ್ಲಿ)	ಅರ್ಜಿ ಶುಲ್ಕ (ಜಿ.ಎಸ್.ಟಿ ಸೇರಿ)
1	ಹಾಸನ ನಗರ ಸಾರಿಗೆ ಬಸ್ ನಿಲ್ದಾಣ	ಹಾಲ್ ಎ-1	2,64,213.00	7,92,141.00	5984	3190.00
2	--ಡಿಟೋ--	ಹಾಲ್ ಎ-2	2,00,759.00	6,01,777.00	4546	2360.00
3	--ಡಿಟೋ--	ತೆರೆದ ಜಾಗದ ಮಳಿಗೆ (ಮುಂಭಾಗ)	56,870.00	1,70,150.00	965	708.00
4	--ಡಿಟೋ--	ಸೈಕಲ್/ಸ್ಕೂಟರ್/ಕಾರು ನಿಲ್ದಾಣ.	4,54,170.00	13,62,010.00	60556	3540.00

ಸದರಿ ಸಂಧಾನವನ್ನು ದಿನಾಂಕ:18-01-2018ರಂದು ಸಮಯ 15.00 ಕ್ಕೆ ವಿಭಾಗೀಯ ಕಛೇರಿ ಬಿ.ಎಂ.ರಸ್ತೆ ಹಾಸನದಲ್ಲಿ ಕರೆಯಲಾಗಿದೆ. ಪರವಾನಗಿಯನ್ನು ನೀಡುವ ಬಗ್ಗೆ ಸಂಸ್ಥೆಯ ನಿಯಮ ಹಾಗೂ ನಿಬಂಧನೆಗಳ ಬಗ್ಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ಮಾಹಿತಿ/ವಿವರವನ್ನು ಪಡೆಯಬಹುದಾಗಿದೆ. ಯಾವುದೇ ಕಾರಣಗಳನ್ನು ನೀಡದೆ ಸಂಧಾನವನ್ನು ರದ್ದುಪಡಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಸಂಧಾನ ಪ್ರಕ್ರಿಯೆಯಲ್ಲಿ ಆಯ್ಕೆಯಾದವರು ಪರವಾನಗಿ ಶುಲ್ಕಕ್ಕೆ ಸೇವಾ ತೆರಿಗೆಯನ್ನು ಪಾವತಿಸುವುದು ಮತ್ತು ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32ಂ (ಜೆ) (III)ರಲ್ಲಿ ಪರಿಷ್ಕೃತ ಸ್ಟಾಂಪ್ ಆಕ್ಟ್ ನಂ 8/2003.ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಹಾಸನ ವಿಭಾಗ, ಹಾಸನ